ಶ್ರೀ ಬಿ.ಆರ್. ಗುರುದೇವ್ :- ಸನ್ಮಾನ್ಯ ಉಪಾಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಗೆ ಸೇಂದಿ ಮಾರಾಟ ಪರವಾನಗಿ ನೀಡಲಾಗಿದ್ದು, ಸಕಲೇಶಪುರ ತಾಲ್ಲೂಕಿಗೆ ಪರವಾನಗಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ "ಹೌದು" ಎಂದು ಹೇಳಿದ್ದಾರೆ. ಸಕಲೇಶಪುರ ತಾಲ್ಲೂಕಿನಲ್ಲಿ ಈ ಉದ್ಯೋಗವನ್ನೇ ನಂಬಿ ಸುಮಾರು 7 ಸಾವಿರ ಜನ ಬೀದಿ ಪಾಲಾಗಿದ್ದಾರೆ. ಸಕಲೇಶಪುರದಲ್ಲಿ ಏತಕ್ಕೆ ಲೈಸೆನ್ಸ್ ಕೊಡಬಾರದು ಎಂದು ಕೇಳಿದ್ದಕ್ಕೆ, ಈ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ, ನಾನು ತಮ್ಮ ಮುಖಾಂತರ ಮಾನ್ಯಮಂತ್ರಿಗಳನ್ನು ಕೇಳಬಯಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರೋಗ್ಯ ದೃಷ್ಟಿಯಿಂದ ಯಾವ ಪರವಾನಗಿಯನ್ನು ನೀಡಿದ್ದೀರಿ ಅದೇ ರೀತಿಯಲ್ಲಿ ಸಕಲೇಶಪುರ ತಾಲ್ಲೂಕಿನ 7 ಸಾವಿರ ಜನಕ್ಕೆ ಲೈಸೆನ್ಸ್ ಕೊಟ್ಟು, ಅವರ ಜೀವನಕ್ಕೆ ದಾರಿ ಮಾಡಿಕೊಡಬೇಕು. ಈ ಬಗ್ಗೆ ಸದನದಲ್ಲಿ ಭರವಸೆ ನೀಡಬೇಕೆಂದು ತಮ್ಮ ಮುಖಾಂತರ ಮಾನ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಧರ್ಮಸಿಂಗ್ :- ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದಕ್ಕೆ ಅವಕಾಶ ಕೊಡತಕ್ಕಂಥ ಕಾರಣಗಳು ಬೇರೆ, ಅಲ್ಲಿರತಕ್ಕಂಥ ಮೂರ್ತೆದಾರರಿಗೆ ತೊಂದರೆ ಆಗಿದೆ, ಅಲ್ಲಿ ಸಾಕಷ್ಟು ಮರಗಳು ಇವೆ ಎಂದು ಅಲ್ಲಿನ ಶಾಸಕರೂ ಕೂಡಾ ಸರಕಾರಕ್ಕೆ ಮನವಿ ಮಾಡಿದ ಮೇಲೆ ಸರಕಾರ ಇದರ ಬಗ್ಗೆ ಒಂದು ಡಿಸಿಷನ್ ತೆಗೆದುಕೊಂಡಿದೆ. ಸಕಲೇಶಪುರ ತಾಲ್ಲೂಕಿನಲ್ಲಿ ಮರಗಳು ಇವೆ, ಇದಕ್ಕೆ ಅವಕಾಶ ಕೊಡಬೇಕೆಂದು ಹೇಳಿದ್ದಾರೆ. ಹಾಸನ ಜಿಲ್ಲೆಯಲ್ಲಿ ಎಷ್ಟು ಮರಗಳು ಇವೆ, ಅದರಲ್ಲಿ ಸಕಲೇಶಪುರ ತಾಲ್ಲೂಕಿನಲ್ಲಿ ಎಷ್ಟು ಬರುತ್ತವೆ ಎಂಬುದನ್ನು ಪರಿಶೀಲನೆ ಮಾಡುತ್ತೇವೆ. ಈ ತಿಂಗಳಲ್ಲಿ ನೋಡಿ ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ.ಆರ್. ಗುರುದೇವ್ :- ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ ಹಾಗೆ ನಮ್ಮ ತಾಲ್ಲೂಕಿನಲ್ಲಿ 7 ಸಾವಿರ ಜನ ಈ ಒಂದು ಉದ್ಯೋಗದಲ್ಲಿದ್ದಾರೆ 7 ಸಾವಿರ ಜನ ಎಂದರೆ ಮರಗಳು ಜಾಸ್ತಿ ಇವೆ ಎಂದು ಗೊತ್ತಾಗುತ್ತದೆ. ಇವತ್ತು ಅವರೆಲ್ಲರೂ ಬೀದಿ ಪಾಲಾಗಿದ್ದಾರೆ. ಆದುದರಿಂದ ದಯವಿಟ್ಟು ಅವಕಾಶ ಮಾಡಿಕೊಡಬೇಕು.

ಶ್ರೀ ಧರ್ಮಸಿಂಗ್ :- ನಾನು ಎಕ್ಸಾಮಿನ್ ಮಾಡುತ್ತೇನೆಂದು ಹೇಳಿದ್ದೇನೆ.

ಲಂಬಾಣಿ ತಾಂಡಾಗಳಲ್ಲಿ ಸಾರಾಯಿ ಅಂಗಡಿಗಳು

1551. ಶ್ರೀ ಬಾಬುರಾವ್ ಚವ್ಹಾಣ್(ಶಹಾಬಾದ್):- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಲಂಬಾಣಿ ತಾಂಡಾಗಳಲ್ಲಿ ಶರಾಯಿ ಅಂಗಡಿಯನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ರಾಜ್ಯದಲ್ಲಿ ಲಂಬಾಣಿ ತಾಂಡಾಗಳಲ್ಲಿ ಇರುವ ಶರಾಯಿ ಅಂಗಡಿಗಳ ಸಂಖ್ಯೆ ಎಷ್ಟು ;

ಇ) ಹರಿಜನ ಗಿರಿಜನ ಸಮುದಾಯಕ್ಕೆ ಸೇರಿರುವ ಲಂಬಾಣಿ ತಾಂಡಾಗಳಲ್ಲಿ ಶರಾಯಿ ಅಂಗಡಿ ನಡೆಸಬಾರದೆಂದು ಅಬಕಾರಿ ಕಾಯಿದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಲಂಬಾಣಿ ತಾಂಡಾಗಳಲ್ಲಿ ಇರುವ ಶರಾಯಿ ಅಂಗಡಿ ತೆಗೆದು ಹಾಕುವಲ್ಲಿ ಸರ್ಕಾರದ ನಿಲುವೇನು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) –

ಅ) ಇಲ್ಲ.

ಆ) ಲಂಬಾಣಿ ತಾಂಡಾಗಳಲ್ಲಿ ಸಾರಾಯಿ ಅಂಗಡಿಗಳು ಇರುವುದಿಲ್ಲ.

ಇ) ಬಂದಿದೆ.

ಈ) (ಅ) ಪ್ರಶ್ನೆಗೆ ನೀಡಿರುವ ಉತ್ತರದಿಂದಾಗಿ ಉದ್ಭವಿಸುವುದಿಲ್ಲ, ಈ ಸಂಬಂಧ ಕೆಲವು ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

ಶ್ರೀ ಬಾಬೂರಾವ್ ಚವ್ಹಾಣ್ :- ಮಾನ್ಯ ಅಧ್ಯಕ್ಷರೇ, ನಾನು ಕೇಳಿರತಕ್ಕಂಥ ಪ್ರಶ್ನೆ ಏನೆಂದರೆ, ಲಂಬಾಣಿ ತಾಂಡಾಗಳಲ್ಲಿ ಸಾರಾಯಿ ಅಂಗಡಿಗಳನ್ನು ನಡೆಸುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ. ಆದರೆ ಇದು ಸರಕಾರದ ಗಮನಕ್ಕೆ ಬಂದಿಲ್ಲ ಎಂದು ಉತ್ತರ ಹೇಳಿದ್ದಾರೆ. ಅಂದರೆ ತಾಂಡಾಗಳಲ್ಲಿ ಅಂಗಡಿಗಳು ನಡೆಯುತ್ತಿಲ್ಲ ಎಂದು ಉತ್ತರ ಬಂದಿದೆ. ಹಾಗಿದ್ದಲ್ಲಿ ಲಂಬಾಣಿ ತಾಂಡಾಗಳಲ್ಲಿರುವ ಅಂಗಡಿಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದೇನೆ. ಲಂಬಾಣಿ ತಾಂಡಾಗಳಲ್ಲಿ ಸಾರಾಯಿ ಅಂಗಡಿಗಳು ಇರುವುದಿಲ್ಲ ಎಂದು ಸರಕಾರದ ಉತ್ತರ ಬಂದಿದೆ. ಮಾನ್ಯ ಸಚಿವರು ನಮ್ಮ ಜಿಲ್ಲೆಯವರೇ, ಮಾನ್ಯ ಖರ್ಗೆ ಸಾಹೇಬರೂ ಸಹ ನಮ್ಮ ಜಿಲ್ಲೆಯವರೇ. ಇಲ್ಲಿರತಕ್ಕಂಥ ಎಲ್ಲಾ ಶಾಸಕರಿಗೂ ಕೂಡಾ ಗೊತ್ತಿರಬೇಕು, ಗೊತ್ತಿದೆ, ಏನೆಂದರೆ ಲಂಬಾಣಿ ಅಂಗಡಿಗಳಲ್ಲಿ ಸಾರಾಯಿ ಅಂಗಡಿಗಳು ಇವೆ. ನಾನು ಯಾವ ಆಧಾರದ ಮೇಲೆ ಇದನ್ನು ಹೇಳುತ್ತಿದ್ದೇನೆ ಎಂದರೆ, ನನ್ನ ನೇಟೀವ್ ಇರತಕ್ಕಂಥ ಮಳಖೇಡ್ ತಾಂಡಾದಲ್ಲಿ ನನ್ನ ಮನೆ ಎದುರುಗಡೆ ಒಂದು ಸಾರಾಯಿ ಅಂಗಡಿ ಇದೆ. ಅಲ್ಲಿ ಸಾಕಾದಷ್ಟು ಜಗಳವಾಗಿದೆ, ಪೋಲೀಸ್ ಕಂಪ್ಲೇಂಟ್ ಆಗಿದೆ. ತಾಂಡಾದಲ್ಲಿ ಜನರು ಕುಡಿದು ಜಗಳವಾಡುತ್ತಾರೆ. ಎಲ್ಲಾ ತಾಂಡಾಗಳಲ್ಲಿ ಸಾರಾಯಿ ಅಂಗಡಿಗಳು ಸುಮಾರಾಗಿ ಇದ್ದೇ ಇವೆ. ಆದುದರಿಂದ ನಾನು ಸರಕಾರಕ್ಕೆ ಕಳಕಳಿಯಿಂದ ಕೇಳಿಕೊಳ್ಳುವುದು ಏನೆಂದರೆ ಲಂಬಾಣಿ ತಾಂಡಾಗಳಲ್ಲಿರುವ ಸಾರಾಯಿ ಅಂಗಡಿಗಳನ್ನು ತೆಗೆದುಹಾಕಿ ಅದರ ಬದಲು ಕುಡಿಯುವುದಕ್ಕೆ ನೀರು ಕೊಡಿ. ಶಾಲೆ ಕೊಡಿ, ರಸ್ತೆ ಕೊಡಿ, ಸಾರಾಯಿ ಅಂಗಡಿ ಕೊಡುವುದರ ಬದಲು ಕುಡಿಯುವ ನೀರು ಕೊಟ್ಟರೆ ಒಳ್ಳೆಯ ಸಹಕಾರ ಮಾಡಿದ ಹಾಗೆ ಆಗುತ್ತದೆ. ಲಂಬಾಣಿ ತಾಂಡಾಗಳಲ್ಲಿ ಜನರು ಕುಡಿದು ಜಗಳ ಆಡಿಕೊಂಡು ಪೋಲೀಸ್ ಸ್ಟೇಷನ್‌ಗೆ ಹೋಗಿ ಕೇಸ್ ಆಗುವಂತಹ ದೊಡ್ಡ ಸಮಸ್ಯೆಯನ್ನು ತಾವು ಪರಿಹಾರ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಧರ್ಮಸಿಂಗ್ :- ಮಾನ್ಯ ಅಧ್ಯಕ್ಷರೆ, ಲುಬಾಣಿ ತಾಂಡಾಗಳಲ್ಲಿ ಸರಕಾರದ ವತಿಯಿಂದ ಸಾರಾಯಿ ಅಂಗಡಿಗಳನ್ನು ಕೂಟ್ಟಿದ್ದಾರೆಯೇ ಎಂದು ಕೇಳಿದ್ದಾರೆ, ಅದಕ್ಕೆ 'ಇಲ್ಲ' ಎಂದು ಹೇಳಿದ್ದೇವೆ. ಎಷ್ಟಿದೆ ಎಂದು ಕೇಳಿದ್ದಾರೆ, ಮೇಲಿನ ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂಬ ಮಾತನ್ನು ಹೇಳಿದ್ದೇವೆ. ಬೇರೆ ಕಡೆಗೆ ಲಂಬಾಣಿ ತಾಂಡಾಗಳಲ್ಲಿ ಸಾರಾಯಿ ಅಂಗಡಿಗಳು ಇಲ್ಲೀಗಲ್ ಆಗಿ ನಡೆಯುತ್ತಿವೆಯೋ ಇಲ್ಲವೋ ಎಂಬುದನ್ನು ನಿರಾಕರಣೆ ಮಾಡುತ್ತಿಲ್ಲ. ಎಲ್ಲೆಲ್ಲಿ ತಾಂಡಾದಲ್ಲಿ ಈ ರೀತಿ ಆಗುತ್ತಿದೆ ಎಂಬ ಮಾತಿನ ಪ್ರಸ್ತಾಪ ಬಂದಾಗ ತಾವು ನೋಟೀಸ್ ತೆಗೆದುಕೊಂಡು ಬನ್ನಿ. ಎಲ್ಲಾ ಕಡೆಗೆ ಟೆಂಪಲ್ಸ್, ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ಇದ್ಕ ಕಡೆ ಹಾಗೂ ಲಂಬಾಣಿ ತಾಂಡಾಗಳಿಗೆ ಕೊಡಬಾರದೆಂದು ಸರಕಾರ ತೀರ್ಮಾನ ತೆಗೆದುಕೊಂಡಿದೆ. ಹಾಗಿದ್ದರೂ ಎಲ್ಲಾದರೂ ನಡೆಯುತ್ತಿದೆ ಎನ್ನತಕ್ಕಂಥಾದ್ದು ಇದ್ದರೆ, ಅನಧಿಕೃತವಾಗಿ ಮಾಡುತ್ತಾ ಇರಬಹುದು. ಆದರೂ ಕೂಡ ತಮ್ಮ ಒಂದು ಕ್ಷೇತ್ರದಲ್ಲಿ ಅಥವಾ ಬೇರೆ ಕಡೆ ಕೂಡ ಇದ್ದರೆ ಈಗಲೇ ನಾನು ಕಮೀಷನರ್‌ರವರಿಗೆ ಹೇಳುತ್ತೇನೆ, ಕರ್ನಾಟಕ ರಾಜ್ಯದಲ್ಲಿ ಈ ತರಹ ಲಂಬಾಣಿ ತಾಂಡಾಗಳಲ್ಲಿ ಸಾರಾಯಿ ಅಂಗಡಿಗಳು ನಮ್ಮ ಅಪ್ಪಣೆ ಇರಲಾರದೆ ನಡೆಸುತ್ತಾ ಇರತಕ್ಕಂಥಾದ್ದು ಇದ್ದರೆ ಈಗಲೇ ತಕ್ಷಣ ನಿಲ್ಲಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಹೆಚ್. ಯೆಂಕಾನಾಯಕ್ :- ಮಾನ್ಯ ಅಧ್ಯಕ್ಷರೇ, ನಮ್ಮ ಹರಪನಹಳ್ಳಿ ತಾಲ್ಲೂಕಿನಲ್ಲಿ ಸುಮಾರು 53 ತಾಂಡಾಗಳು ಇವೆ, ಒಂದೊಂದು ತಾಂಡಾದಲ್ಲಿ ಮೂರು ಮೂರು ಅಂಗಡಿಗಳು ಇವೆ, ಲೈಸೆನ್ಸ್ ಇಲ್ಲದೆ ಯಾವ ರೀತಿ ಮಾಡುತ್ತಾರೆ ಎಂದರೆ, ಗುತ್ತೆದಾರರು ಮಾಲೀಕದಾರರು ಒಂದೊಂದು ತಾಂಡಾಕ್ಕೆ ಒಂದೊಂದು ಮೈಕ್ ಸೆಟ್ ಹಾಕಿಕೊಂಡು ಮಾಡುತ್ತಿದ್ದಾರೆ, ಆಮೇಲೆ ಪಾರ್ಟಿಯಲ್ಲಿ ಹಿಂದಿನ ಎಲೆಕ್ಷನ್‌ನಲ್ಲಿ ಪಾರ್ಟಿಗಳು ಆದಮೇಲೆ, ತಾಂಡಾದಲ್ಲಿ ಒಂದೊಂದು ಪಾರ್ಟಿಯಿಂದ ಒಂದೊಂದು ಎಂಬಂತೆ ಒಂದೊಂದು ತಾಂಡಾದಲ್ಲಿ ಮೂರು ಮೂರು ಇದ್ದಾರೆ. ಅಂತಹದರಲ್ಲಿ ನಾನು ತಹಸೀಲ್ದಾರರು ಮತ್ತು ಸಿ.ಪಿ.ಐ. ಸಾಹೇಬರನ್ನು ಕರೆದುಕೊಂಡು ಹೋಗಿ ಸೀಜ್ ಮಾಡಿಸಿದಾಗ, ಅವತ್ತು ತಿರುಗಿ ಬಿದ್ದರು. ಸನ್ಮಾನ್ಯ ಶಿವಮೂರ್ತಿಯವರು ಅಬಕಾರಿ ಮಂತ್ರಿಗಳಾಗಿದ್ದ ಕಾಲದಲ್ಲಿ ಇಲ್ಲಿಂದ ಒಂದು ಡೈರೆಕ್ಷನ್ ಕೊಟ್ಟರು. ಲಂಬಾಣಿ ತಾಂಡಾಗಳಲ್ಲಿ ಒತ್ತಾಯ ಮಾಡಿ ಸಾರಾಯಿ ಅಂಗಡಿಗಳನ್ನು ಮಾಡಬೇಡಿ ಎಂದು ಆದೇಶ ಕೊಟ್ಟರು. ಆದರೂ ಪ್ರೋರ್ಜರಿ ಮಾಡಿ ಪೋಲೀಸರನು ಕರೆದುಕೊಂಡು ಹೋಗಿ ಮಾಡಿದ್ದಾರೆ. ನಾವು ಏದೇ ತಾಲ್ಲೂಕಿನವರು ಏದೇ ನಮ್ಮ

ಊರಿನಲ್ಲಿ ಪೋಲೀಸರನ್ನು ಕರೆದುಕೊಂಡು ಬಂದು ಫೋರ್ಜರಿಯಿಂದ ತಾಂಡಾದಲ್ಲಿ ಅಂಗಡಿ ಇಡಿಸಿದ್ದಾರೆ. ಕೆಲವು ತಾಂಡಾದಲ್ಲಿ ಕುಡಿಯುವುದು, ಗಂಡಹೆಂಡತಿ ಜಗಳ ಮಾಡಿ ರಾತ್ರಿ ಆದರ ಜೊತೆಗೆ ಫಾಲೀಡಾಲ್ ಕುಡಿಯುವುದು, ಸಾಯುವುದು, ಆ ರೀತಿಯಾಗಿದೆ. ಆ ರೀತಿಯಾಗಿರುವಾಗ, ಗುಲ್ಬರ್ಗಾ ವಿಭಾಗದಲ್ಲಿ ನಮ್ಮ ಹರಪನಹಳ್ಳಿ, ಹಡಗಲಿ, ಕೂಡಲಗಿ, ತಾಲ್ಲೂಕಿನಲ್ಲಿ ಪ್ರತಿಯೊಂದು ತಾಂಡಕ್ಕೆ ಮೂರು ಮೂರು ಅಂಗಡಿಗಳು ಇವೆ, ಇವರಿಗೆ ಲೈಸೆನ್ಸ್ ಕೊಟ್ಟಿದ್ದಾರೋ ಬಿಟ್ಟಿದ್ದಾರೋ ಗೊತ್ತಿಲ್ಲ.

11–50 ಎ.ಎಂ

ಮತ್ತೇ ಪ್ರತ್ಯೇಕವಾಗಿ ಹೋಗಿ ಫೋರ್ಜರಿ ಮಾಡಿ ಒತ್ತಾಯ ಮಾಡಿ ಸರ್ಕಾರವೇ ಕೊಡುವಾಗ ನೀವು ಏತಕ್ಕೆ ಇಡುವುದಿಲ್ಲ ಅಂತ ಹೇಳಿ ಪೋಲೀಸಿನವರನ್ನು ಕರೆದುಕೊಂಡು ಹೋಗಿ ಅಂಗಡಿ ಇಡಿಸುತ್ತಿದ್ದಾರೆ. ಈ ತಾಂಡಾಗಳಲ್ಲಿ ಬಾಬುರಾವ್ ಚವಾಣ್‌ರವರು ಹೇಳಿದ ಹಾಗೆ ಕುಡಿಯುವ ನೀರು ಇಲ್ಲ ರಾತ್ರಿ ಹೊತ್ತು ಕೆಲಸದಿಂದ ಬಂದು ಕುಡಿದು ಗಂಡ ಹೆಂಡರು ಜಗಳ ಮಾಡುತ್ತಾರೆ. ಸಾರಾಯಿ ಕುಡಿದು ಕುಡಿದು ತಾಂಡಾಗಳ ಜನ ನಿರ್ಗತಿಕರಾಗಿದ್ದಾರೆ. ದಯಮಾಡಿ ತಾಂಡಗಳಲ್ಲಿರುವ ಅಂಗಡಿಗಳನ್ನು ತೆಗೆಸಿ ಅಲ್ಲಿ ಈ ಅಂಗಡಿಗಳು ಇಡದಂತೆ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಾಬುರಾವ್ ಚವಾಣ್ :- ಮಾನ್ಯ ಅಧ್ಯಕ್ಷೆಯವರೇ ಈ ಇಲಾಖೆಯನ್ನು ಹೊಂದಿರತಕ್ಕಂಥ ಮಾನ್ಯ ಮಂತ್ರಿಗಳು ಒಂದು ಆದೇಶವನ್ನು ಹೊರಡಿಸಬೇಕು. ಎಲ್ಲಿ ತಾಂಡಾಗಳು ಇವೆ ಅಲ್ಲಿ ಸಾರಾಯಿ ಅಂಗಡಿಗಳು ಇಡದಂತೆ ಒಂದು ಆದೇಶವನ್ನು ಕೊಟ್ಟರೆ ಅದು ಕಂಟ್ರಾಕ್ಟ್‌ರ್ಸ್‌ಗೆ ಒಳ್ಳೆಯದಾಗುತ್ತದೆ. ಈಗ ಕಂಟ್ರಾಕ್ಟ್‌ರ್ಸ್ ಏನು ಮಾಡುತ್ತಾರೆಂದರೆ ಊರಿಗೆ ಇರತಕ್ಕಂಥ ಹೆಸರು ಮೇಲೆ ಕೊಡುತ್ತಾರೆ. ಅದೇ ಹೆಸರಿನಲ್ಲಿ ಈ ತಾಂಡದಲ್ಲೂ ತಂದು ಸಾರಾಯಿ ಕುಡಿಸುತ್ತಾರೆ. ನಾನು ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಲಂಬಾಣಿ ತಾಂಡಗಳಲ್ಲಿ ಎಸ್. ಸಿ. ಎಸ್. ಟಿ. ಜನಾಂಗದವರು ಇರುವುದರಿಂದ ಈ ಎಸ್. ಸಿ. ಎಸ್.ಟಿ. ಲೊಕ್ಯಾಲಿಟಿಯಲ್ಲಿ ಸಾರಾಯಿ ಅಂಗಡಿಗಳು ಇರಬಾರದು ಅಂತ ಎಕ್ಸೈಜ್ ಆಕ್ಟ್‌ನಲ್ಲಿದೆ. ಇದ್ದರಿಂದ ನಾನು ತಮಗೆ ಕೇಳಿಕೊಳ್ಳುತ್ತೇನೆ ಆ ಆಕ್ಟ್‌ನ್ನು ಚಲಾಯಿಸಿ ಎಲ್ಲೆಲ್ಲಿ ತಾಂಡಗಳು ಇವೆ ಅಲ್ಲಿ ಸಾರಾಯಿ ಅಂಗಡಿಗಳನ್ನು ತೆಗೆಯದಂತೆ ತಾವು ಒಂದು ಸ್ಪಷ್ಟವಾದ ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ :- ಮಾನ್ಯ ಉಪಾಧ್ಯಕ್ಷೆಯವರೇ ಮಾನ್ಯ ಬಾಬುರಾವ್ ಚವಾಣ್ ರವರು ಮತ್ತು ಮಾನ್ಯ ಯಂಕಾನಾಯಕ್‌ರವರು ಕಳಕಳಿಯಿಂದ ಮನವಿ ಮಾಡಿದ್ದಾರೆ. ಇವತ್ತು ಎಲ್ಲಾ ತಾಂಡಗಳಲ್ಲಿ ನಡೆಯುತ್ತಿದೆ ಎನ್ನತಕ್ಕ ಮಾತನ್ನು ಕೂಡ ಹೇಳಿದ್ದಾರೆ, ನಡೆಯುತ್ತಿರಬಹುದು. ಲಂಬಾಣಿ ತಾಂಡಗಳಲ್ಲಿ ಅಲ್ಲಿಯೇ ತಯಾರು ಮಾಡಿ ಅಲ್ಲಿಯೇ ಮಾರಾಟ ಮಾಡತಕ್ಕಂಥಾದ್ದು ಕೂಡ ಸರ್ಕಾರದ ಗಮನಕ್ಕೆ ಬಂದಿದೆ. ಸರ್ಕಾರ ಯಾರಿಗೂ ಪರವಾನಗಿ ಕೊಟ್ಟಿಲ್ಲ, ಎಲ್ಲೆಲ್ಲಿ ಈ ತರಹ ಇರುತ್ತದೆಯೋ ಅಲ್ಲಿ ಲೋಯರ್ ಆಫೀಸರ್ಸ್ ಕಡೆಯಿಂದ ಹತೋಟಿಗೆ ತರಲು ಆಗುವುದಿಲ್ಲ, ಆದಕ್ಕೆ ಎಫೆಕ್ಟೀವ್ ಆಗಿ, ಜಾಯಿಂಟ್ ಆಪರೇಷನ್, ಪೋಲೀಸ್ ಡಿಪಾರ್ಟ್‌ಮೆಂಟ್ ಮತ್ತು ಎಕ್ಸೈಜ್ ಸ್ಟಾಡ್ ಅಲ್ಲಿ ಸೇರಿಕೊಂಡು ದಕ್ಷ ಅಧಿಕಾರಿ ಯಾರಿದ್ದಾರೆ ಅವರನ್ನು ಸ್ಟಾಡ್‌ಗೆ ಹಾಕಿದರೆ ಇದು ಎಫೆಕ್ಟೀವ್ ಆಗಿ ಕೆಲಸ ಆಗುತ್ತದೆ. ಇದು ಬಿಟ್ಟುಸುಮ್ಮನೆ ಸರ್ಕ್ಯೂಲರ್ ಮೇಲೆ ಸರ್ಕಾರದ ಉದ್ದೇಶ ಏನಿದೆ ಇದು ಸಾಧ್ಯವಾಗುವುದಿಲ್ಲ. ತಾವು ಕೇಳಿದ ಪ್ರಶ್ನೆಯನ್ನು ಬಗೆಹರಿಸುವ ಸಲುವಾಗಿ ಎಫೆಕ್ಟೀವ್ ಬರುವ ರೀತಿಯಲ್ಲಿ ಸರ್ಕಾರ ಇದರ ಬಗ್ಗೆ ತೀವ್ರವಾಗಿ ವಿಚಾರ ಮಾಡುತ್ತಿದೆ.

ಶ್ರೀ ಸಾದತ್ ಅಲಿ ಖಾನ್ :- ಮಾನ್ಯ ಮಂತ್ರಿಗಳು ವೈನ್ ಶಾಪ್ಸ್ ಮತ್ತು ಟಾಡಿ ಶಾಪ್ಸ್ ಲೈಸೆನ್ಸ್‌ನ್ನು ಸ್ಕೂಲ್ ಮತ್ತು ಕಾಲೇಜ್ ಮತ್ತೇ ರಿಲೀಜಿಯಸ್ ಪ್ಲೇಸಸ್‌ಗಳ ಹತ್ತಿರ ಕೊಟ್ಟಿಲ್ಲವೆಂದು ಹೇಳಿದರು. ಈಗ ಮೈಸೂರು ಮತ್ತು ಬೆಂಗಳೂರು ರಸ್ತೆಯಲ್ಲಿ ಬರುವ ಚನ್ನಪಟ್ಟಣ ಕೊಂಕೋ ಕಾಲೇಜು ಮುಂದೆ ಒಂದು ತಿಂಗಳ ಹಿಂದೆ 2 ಶಾಪ್ಸ್ ಓಪನ್ ಆಗಿದೆ. ಅದೇ ರೀತಿ ಬೆಂಗಳೂರು ಮತ್ತು ಮೈಸೂರು ರಸ್ತೆಯಲ್ಲಿ 50 ವೈನ್ ಶಾಪ್ಸ್ ಓಪನ್ ಆಗಿರಬಹುದು. ಈ ವರ್ಷ ನನಗೆ ಗೊತ್ತಿರುವ ಪ್ರಕಾರ 91–92ರಲ್ಲಿ ಎಷ್ಟು ಶಾಪ್ಸ್ ಕೊಟ್ಟಿದ್ದೀರಿ. ಈ ವರ್ಷ ಎಷ್ಟು ಲೈಸೆನ್ಸ್

ಕೊಟ್ಟಿದ್ದೀರಿ. . Can the Minister give me how many licenses have been issued during 1991–92?

Sri Dharam Singh :– If a separate question is put, I will answer it.

ಶ್ರೀ ಹೆಚ್. ವಿಶ್ವನಾಥ್ :- ಮಾನ್ಯ ಅಧ್ಯಕ್ಷರೇ ಸಾರಾಯಿ ಮಾರಾಟ ಚಿಲ್ಲರೆ . ಅಂಗಡಿಗಳಿಗೂ ಬಂದಿದೆ. ನಾವು ಜನಸಂಖ್ಯೆ ನಿಯಂತ್ರಣ ಮಾಡಲು ನಿರೋದ್ ಉಪಯೋಗ ಮಾಡಿ ಎಂದು ಹೇಳಿದರೆ, ಇವತ್ತು ಚಿಲ್ಲರೆ ಅಂಗಡಿಗಳಲ್ಲಿ ನಿರೋದ್ ಸಿಗುತ್ತಿಲ್ಲ. ಚಿಲ್ಲರೆ ಅಂಗಡಿಗಳಲ್ಲಿ ಸಾರಾಯಿ ಪಾಕೇಟ್‌ಗಳಲ್ಲಿ ಸಿಗುತ್ತವೆ. ಮತ್ತೆ ನಿಯಂತ್ರಣ ಮಾಡತಕ್ಕಂಥ ಅಧಿಕಾರಿ ಯಾರಿದ್ದಾರೆ, ಇನ್ಸ್‌ಪೆಕ್ಟರ್ಸ್ ಮತ್ತು ಸಬ್ ಇನ್ಸ್‌ಪೆಕ್ಟರ್ಸ್ ಅವರು ಈ ಸಾರಾಯಿ ನೋಡಿದರೂ ಅದು ಅವರ ಕಣ್ಣಿಗೆ ಕಾಣುತ್ತಿಲ್ಲ. ಇದು ಬಹಳ ಗಂಭೀರವಾದ ವಿಚಾರ ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕು. ಕೇರಿ . ಕೇರಿಗಳಲ್ಲಿ ಬೀಡಿ ಶಾಪ್‌ಗಳಲ್ಲಿ ಟೀ ಶಾಪ್‌ಗಳಲ್ಲಿ ಪ್ಯಾಕೇಟ್‌ಗಳನ್ನು ಮಾರಾಟ ಮಾಡುತ್ತಿದ್ದಾರೆ. ಇದು ಜನರ ಮೇಲೆ ಅತ್ಯಂತ ಪರಿಣಾಮ ಬೀರುತ್ತದೆ. ಆದ್ದರಿಂದ ದಯಮಾಡಿ ಸರ್ಕಾರ ಇದರ ಬಗ್ಗೆ ಕಠಿಣ ಕ್ರಮ ಏನು ತೆಗೆದುಕೊಳ್ಳುತ್ತದೆಂದು ಉತ್ತರ ಬಯಸುತ್ತೇನೆ.

ಶ್ರೀ ಧರ್ಮಸಿಂಗ್ :- ಉಪಾಧ್ಯಕ್ಷಣಿಯವರೇ ವಿಶ್ವನಾಥ್‌ರವರು ಏನು ಪ್ರಸ್ತಾಪ ಮಾಡಿದ್ದಾರೆಂದರೆ ಎಲ್ಲಾ ಕಡೆಗೆ ಸಿಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ ಇದರ ಬಗ್ಗೆ ಎಫೆಕ್ಟೀವ್ ಆಗಿಲ್ಲವೆಂದು ಹೇಳಿದ್ದಾರೆ, ಸರ್ಕಾರ . ಇದರ ಬಗ್ಗೆ ಗಂಭೀರವಾಗಿ ವಿಚಾರ ಮಾಡುತ್ತದೆ.

ಶ್ರೀ ಬಿ. ಹೆಚ್. ಯುಂಕಾನಾಯಕ್ :- ನಮ್ಮ ಲಂಬಾಣಿ ತಾಂಡಾಗಳಲ್ಲಿ ಫೋರ್ಜರಿ ಮಾಡಿ ಅವರು ಬೇಡ ಅಂದರು ಒತ್ತಾಯ ಮಾಡಿ ಮೈಕ್‌ಗಳ ಮೂಲಕ ಬೀದಿ ಬೀದಿಗಳಲ್ಲಿ ಕೇರಿ ಕೇರಿಗಳಲ್ಲಿ ಜನರಿಗೆ ತೊಂದರೆ ಕೊಡುತ್ತಿದ್ದಾರೆ. ಆ ದೃಷ್ಟಿಯಲ್ಲಿ ಹಿಂದಿನ ಜಿಲ್ಲಾಧಿಕಾರಿಗಳವರು ಬಂದು ಅದನ್ನೆಲ್ಲಾ ಸೀಸ್ ಮಾಡಿ ಇಬ್ಬರನ್ನು ಸಸ್ಪೆಂಡ್ ಮಾಡಿದ್ದರು. ಅವರು ಹೋದ ಮೇಲೆ ಈಗ ಅವರದೇ ದರ್ಬಾರು. ಆದ್ದರಿಂದ, ದಯಮಾಡಿ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ ಅದನ್ನು ನಿಲ್ಲಿಸಬೇಕೆಂದು ನಾನು ತಮ್ಮ ಮೂಲಕ ಸನ್ಮಾನ್ಯ ಸಚಿವರಿಗೆ ಮನವಿ ಮಾಡಿಕೊಳ್ಳುತ್ತೇನೆ. ಅವರು ಬೇಡ ಎಂದರೂ ಮೈಕ್ ಸೆಟ್ಟು ಕೊಡುತ್ತಿದ್ದಾರೆ. ನಮ್ಮ ತಾಲ್ಲೂಕಿಗೆ ಸುಮಾರು 40–50 ಮೈಕ್ ಸೆಟ್ಟುಗಳನ್ನು ಕೊಟ್ಟಿದ್ದಾರೆ.

ಶ್ರೀ ಧರ್ಮಸಿಂಗ್ :- ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

SRI QUAMARUL ISLAM :– I will tell you specifically that even though there is an Act that there should not be any Liquor shop near by religious institutions, Mandirs, Darga etc., in Gulbarga in my constituency there are liquor shops. I have given complaint in this regard also for taking action on such shops. I will give you another specific instance, in Broadway in Bangalore City in the constituency of Mr. Anantha Krishna, where there are liquor shops. From last four to five years, there have been agitations going on in this area. Whether the Hon'ble Minister for Excise will take action, specifically in Gulbarga and I will give you the list so that these shops may be shifted from that place and also the shops which are near Darga in Bangalore.

SRI DHARAM SINGH :– I will take action.

ಶ್ರೀ ಟಿ.ಬಿ. ಜಯಚಂದ್ರ :- ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ ಲಂಬಾಣಿ ತಾಂಡಾಗಳಾಗಲೀ , ಹಟ್ಟಿಗಳಾಗಲೀ ಎಲ್ಲಿ ಪ್ರತಿಭಟನೆ ಬರುತ್ತದೆಯೋ ಅಲ್ಲಿ ಇವುಗಳನ್ನು ಅಲೋ ಮಾಡುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನಾನಾದರೂ ಸ್ಪೆಸಿಫಿಕ್ ಆಗಿ ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಐ.ಎಂ.ಎಫ್.ಎಲ್. ಶಾಪ್ ಆಗಲಿ ಆರ್ಯಾಕ್ ಶಾಪ್ ಆಗಲಿ ಅಲ್ಲಿ ಸ್ಪೆಸಿಫಿಕ್ ಆಗಿ ಪ್ರತಿಭಟನೆ ಬಂದಂಥ ಸಂದರ್ಭದಲ್ಲಿ ಅದನ್ನು ಶಿಫ್ಟ್ ಮಾಡತಕ್ಕಂಥ ಅಥವಾ ಮಜಾ ಮಾಡತಕ್ಕಂಥ ನಿಯಮ ಏನಾದರೂ ಇದೆಯೇ ನಿಮ್ಮಲ್ಲಿ? ಏಕಸ್ವಾತ್ ಇದ್ದರೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ತಿಮ್ಮಳ್ಳಿ ಎನ್ನತಕ್ಕಂಥ ಒಂದು ಗ್ರಾಮದಲ್ಲಿ ಅಲ್ಲಿನ ಊರಿನ ಹೆಣ್ಣುಮಕ್ಕಳು ಎಲ್ಲರೂ ಸೇರಿ ಅದನ್ನು ಪ್ರತಿಭಟನೆ ಮಾಡಿ ಮಜಾ ಮಾಡಬೇಕೆಂದು ಹೇಳಿ, ನಾನೂ ಸಹಿತಾ ಮುಂದಾಳತ್ವ ವಹಿಸಿದ್ದೆ. ಆದರೆ . ಮಜಾ ಆಗಲಿಲ್ಲ, ಅದಕ್ಕೋಸ್ಕರವಾಗಿ ಸ್ಪೆಸಿಫಿಕ್ ಆಗಿ ಕೇಳುತ್ತಿದ್ದೇನೆ. ಆ ನೀತಿ ಏನಾದರೂ ಇದೆಯೇ? ಅಂಥಾದ್ದು ಗಮನಕ್ಕೆ ಬಂದರೆ ನೀವು ಮಾಡುತ್ತೀರಾ?

ಶ್ರೀ ಧರ್ಮಸಿಂಗ್ :- ಮಾನ್ಯ ಉಪಾಧ್ಯಕ್ಷರೆಯವರೇ, ಎಲ್ಲೆಲ್ಲಿ ನನ್ನ ಗಮನಕ್ಕೆ ಬಂದಿದೆಯೋ ಮತ್ತು ಶಾಸಕರು ಹಾಗೂ ಬೇರೆ ಸಂಘ ಸಂಸ್ಥೆಗಳವರ ಪ್ರತಿಭಟನೆ ಮಾಡಿದ್ದಾರೋ ಅಲ್ಲಿ ಈಗಾಗಲೇ ಸ್ಟಾಪ್ ಮಾಡಿದ್ದೇವೆ. ಯಾರೇ ದೊಡ್ಡವರು ಇದ್ದರೂ ಕೂಡ ಮಾಡಿದ್ದೇವೆ. ನೀವು ಚಿಕ್ಕನಾಯಕನ ಹಳ್ಳಿ. ಬಗ್ಗೆ ಪ್ರಸ್ತಾಪ ಮಾಡಿದ್ದೀರಿ ಅದರ ಬಗ್ಗೆಯೂ ಕೂಡ I will take action.

ಶ್ರೀ ಟಿ. ಬಿ. ಜಯಚಂದ್ರ :- ಇದನ್ನು ನಿಲ್ಲಿಸಿಬಿಟ್ಟರೆ ಬಹಳ ದೊಡ್ಡ ಸಹಾಯ ಮಾಡಿದ ಹಾಗೆ ಆಗುತ್ತದೆ. ಬಹಳಷ್ಟು ಹೆಣ್ಣುಮಕ್ಕಳು ನಮ್ಮ ಪರ ಇರುತ್ತಾರೆ.

ಶ್ರೀ ಕೆ.ಹೆಚ್. ಹನುಮೇಗೌಡ :- ಸ್ವಾಮಿ, ಹರಿಜನ ಕಾಲೋನಿ, ಸ್ಕೂಲ್ ಪಕ್ಕ, ದೇವಸ್ಥಾನದ ಪಕ್ಕ ಇರಕೂಡದೆಂದು ಕಾನೂನು ಪ್ರಕಾರ ಇದ್ದರೂ ಕೂಡ ನೂರಾರು ಲೈಸನ್ಸ್‌ಗಳನ್ನು ಕೊಟ್ಟು ಕಾನೂನು ವಿರುದ್ಧವಾಗಿ ಇದು ನಡೆಯುತ್ತದೆಯಲ್ಲ, ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆ? ಅಧಿಕಾರಿಗಳ ಗಮನಕ್ಕೆ ಬಂದಿಲ್ಲವೆ? ಅಧಿಕಾರಿಗಳ ಗಮನಕ್ಕೆ ಬಂದಿದ್ದು ಮಿನಿಸ್ಟರ್ ಗಮನಕ್ಕೆ ಬಂದಿಲ್ಲವೆ? ಏಕೆ ಇಂಥಾ ಅನ್ಯಾಯಗಳನ್ನು ಮಾಡುತ್ತೀರಿ? ಕಾನೂನು ಮಾಡುವುದು ನಾವೇ ಕಾನೂನು ಮುರಿಯುವುದು ನಾವೇ, ಪಾಪಕ್ಕೆ ಹುಟ್ಟಿದವರನ್ನು ಸರ್ವನಾಶ ಮಾಡುವುದಕ್ಕೆ ಅವಕಾಶ ಮಾಡುವುದು, ಏನಿದೆಲ್ಲಾ? ಅರ್ಥವಾಗುತ್ತಿಲ್ಲ, ನೀವು ಮಂತ್ರಿಯಾಗಿದ್ದುಕೊಂಡು ಇಂಥಾ ಅನ್ಯಾಯ ನಡೆದರೂ ನೀವು ಏಕೆ ಅಲೋ ಮಾಡುತ್ತೀರಿ? ಎಷ್ಟು ಕಡೆ ನಿಮ್ಮ ಗಮನಕ್ಕೆ ಬಂದಿಲ್ಲ? ಎಷ್ಟು ಜನರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ ದಯವಿಟ್ಟು ತಿಳಿಸಬೇಕು. ಇಲ್ಲಾ ಕಾನೂನು ವಜಾ ಮಾಡಿ. ಕಾನೂನು ಮಾಡಿ ಇಟ್ಟಮೇಲೆ ಅದರಂತೆ ನಡೆಯಬೇಕು. ಕಾನೂನು ಮಾಡಿ ಅದರ ಮೇಲೆ ನೀವು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಇಲ್ಲವೇ ಹೋದರೆ ಮಂತ್ರಿಯಾಗಿ ಏಕೆ ಇರಬೇಕು? ಇಲಾಖೆ ಏಕೆ ಇರಬೇಕು? ನಿಮ್ಮ ಅಧಿಕಾರಿಗಳಿಗೆ ಎಲ್ಲಿ ಬೇಕಾದರೂ ಈ ಲೈಸನ್ಸ್‌ನ್ನು ಕೊಟ್ಟುಕೊಳ್ಳಿ ಎಂದು ಹೇಳಿ. ಕಾನೂನು ವಿರುದ್ಧವಾಗಿ ಈ ರೀತಿ ಅತ್ರಮವಾಗಿ ಏನು ಕೊಟ್ಟಿದ್ದಾರೋ ಅವರ ಮೇಲೆ ಏನು ಆಕ್ಷನ್ ತೆಗೆದುಕೊಳ್ಳುತ್ತೀರಿ? ಎಷ್ಟು ದಿನದಲ್ಲಿ ತೆಗೆದುಕೊಳ್ಳುತ್ತೀರಿ? ಎಂಬುದನ್ನು ದಯವಿಟ್ಟು ಅಸೆಂಬ್ಲಿಗೆ ತಿಳಿಸುತ್ತೀರಾ?

ಶ್ರೀ ಧರ್ಮಸಿಂಗ್ :- ಮಾನ್ಯ ಉಪಾಧ್ಯಕ್ಷರೆಯವರೆ, ಸಾಕಷ್ಟು ಸದಸ್ಯರು ಇದರ ಬಗ್ಗೆ ಪ್ರಭಾವ ಬೀರತಕ್ಕಂಥ ಪ್ರಯತ್ನ ಮಾಡಿದ್ದಾರೆ. ಹೈವೇ ಬಗ್ಗೆ, ಟೆಂಪಲ್ಸ್ ಬಗ್ಗೆ, ಎಜುಕೇಷನ್ ಇನ್‌ಸ್ಟಿಟ್ಯೂಷನ್ ಲಂಬಾಣಿ ತಾಂಡ, ಹರಿಜನ ಕೇರಿ ಇಂಥಾ ಕಡೆ ಈ ಅಂಗಡಿಗಳು ಇರುವುದು ಒಂದು ದೊಡ್ಡ ಸಮಸ್ಯೆಯಾಗಿದೆ. ನಾನು ನಮ್ಮ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿ ಇನ್ನು ಮುಂದೆ ಯಾವ ತರಹ ಕ್ರಮ ತೆಗೆದುಕೊಳ್ಳಲಾಗಿದೆ ಎಂಬ ಬಗ್ಗೆ ಇಲಾಖೆಯ ಡಿಮ್ಯಾಂಡ್ ಬಂದಾಗ ನಾನೂ ಕೂಡ ಸ್ಪಷ್ಟವಾಗಿ ಸರ್ಕಾರದ ನಿಲುವು ಏನು ಎಂದು ಸ್ಪಷ್ಟಪಡಿಸುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಚಿಕ್ಕಮಗಳೂರು ಜಿಲ್ಲಾ ಬಂಧೀಖಾನೆ ಕಟ್ಟಡದ ನಿರ್ಮಾಣ

1296. ಶ್ರೀ ಸಿ. ಆರ್. ಸಗೀರ್ ಅಹ್ಮದ್ (ಚಿಕ್ಕಮಗಳೂರು) :- ಮಾನ್ಯ ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಚಿಕ್ಕಮಗಳೂರು ಜಿಲ್ಲಾ ಬಂಧೀಖಾನೆಯ ನೂತನ ಕಟ್ಟಡ ನಿರ್ಮಾಣ ಕಾರ್ಯ ಪ್ರಾರಂಭವಾಗಿದೆಯೆ? ಆಗದಿದ್ದರೆ ಕಟ್ಟಡ ನಿರ್ಮಾಣಕ್ಕಾಗಿ ಇಲ್ಲಿಯವರೆವಿಗೆ ಸರ್ಕಾರದಿಂದ ಬಿಡುಗಡೆ ಮಾಡಿರುವ ಹಣವೆಷ್ಟು ;

ಆ) ಕಾಮಗಾರಿಯ ಪ್ರಗತಿ ಯಾವ ಹಂತದಲ್ಲಿದೆ ;

ಇ) ಈ ನೂತನ ಕಟ್ಟಡದ ಕಾಮಗಾರಿ ಪೂರೈಸಲು ಬೇಕಾಗುವ ಕಾಲಾವಕಾಶವೆಷ್ಟು? ಇದನ್ನು ತ್ವರಿತವಾಗಿ ಕೈಗೊಳ್ಳುವ ಅಥವಾ ಪೂರೈಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಡಿ.ಕೆ. ಶಿವಕುಮಾರ್ (ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು) –

ಅ) ಹೌದು.

ಆ) ಪ್ರಸ್ತುತ ಕಾಂಪೌಂಡ್ ಗೋಡೆಯ ನಿರ್ಮಾಣವು ನಡೆಯುತ್ತಿರುತ್ತದೆ.

ಇ) ಅನುದಾನ ಪೂರೈಸಿದಂತೆ ಶೀಘ್ರವಾಗಿ ಮುಗಿಸಲಾಗುವುದು.